
# ಮೊಸಳೆ ಮತ್ತು ಪಾತರಗಿತ್ತಿ

ಹರ್ಮೀಂದರ್ ಓಹರಿ



Read India
An Imprint of Pratham Books

RGF Pratham
SERIES

Original Story (*English*) Sniffles the Crocodile and Punch the Butterfly
by Herminder Ohri
© Rajiv Gandhi Foundation-Pratham Books, 2004



Second Kannada Edition: 2006

Illustrations: Herminder Ohri
Design: Moonis Ijlal
Kannada Translation: Dr. Divaspathy Hegde

ISBN: 81-8263-087-8

Registered Office:
PRATHAM BOOKS
9, Charles Campbell Road, Cox Town,
Bangalore 560 005
✆ 080-25801462, 25801463

Regional Offices:
Mumbai ✆ 022-65162526
New Delhi ✆ 011-65684113

Typesetting by: Eshwari Graphics, Bangalore 560 050
Layout by: Pratham Books

Printed by:
Repro India Ltd., Mumbai



Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc

# ಮೊಸಳೆ ಮತ್ತು ಪಾತರಗಿತ್ತಿ

ಕಥೆ ಮತ್ತು ಚಿತ್ರಗಳು
**ಹರ್ಮೀಂದರ್ ಓಹರಿ**



ಕನ್ನಡ ಅನುವಾದ
**ಡಾ. ದಿವಸ್ಪತಿ ಹೆಗ್ಡೆ**



ದೂರದಲ್ಲೊಂದು ಅಡವಿಯಿತ್ತು. ಅದರ ಮಧ್ಯದ ಜವುಗು ಪ್ರದೇಶದಲ್ಲಿ ಮೊಸಳೆಗಳ ಸಂಸಾರ ವಾಸವಾಗಿತ್ತು. ಅಲ್ಲೊಂದು ಮರಿ ಮೊಸಳೆ. ದೊಡ್ಡ ದೊಡ್ಡ ಕಣ್ಣೀರ ಹನಿಗಳನ್ನು ಉದುರಿಸಿ ಅಳುವುದು ಅಥವಾ ಮೂಗು ಏರಿಸಿ ಕೊಂಡು ಅತ್ತಿತ್ತ ಮೂಸುವುದು ಇವೇ ಅವನ ಕೆಲಸವಾಗಿತ್ತು. ಅದರಿಂದ ಅವನನ್ನು 'ಮೂಸಿ' ಎಂದೇ ಎಲ್ಲರೂ ಕರೆಯುತ್ತಿದ್ದರು.

ಅವನ ತಾಯಿಗೂ ಒಮ್ಮೊಮ್ಮೆ ಬೇಸರವಾಗಿ ''ಅಳುವುದು, ಮೂಸುವುದು ಬಿಟ್ಟು ಮೊಸಳೆಯಂತೆ ಇರುವುದು ಕಲಿ, ಹೋಗಿ ಆಹಾರ ಬೇಟೆಯಾಡಿ ಕೊಂಡು ಬಾ'' ಎಂದು ಹೇಳುತ್ತಿದ್ದಳು.

ಆದರೆ ಬೇಟೆಯ ಮಾತು ಎತ್ತಿದರೇ ಮೂಸಿ ಅಳುತ್ತಿದ್ದ. ಆದ್ದರಿಂದ ಅವನ ತಂದೆ ತಾಯಿಗಳೇ ಬೇಟೆಯಾಡಿ ಆಹಾರ ತಂದು ಅವನಿಗೆ ಉಣಿಸ ಬೇಕಾಗಿತ್ತು.





ಅಲ್ಲೇ ಒಂದು ಸುಂದರ ಪಾತರಗಿತ್ತಿ ಇತ್ತು. ಅದರ ಹೆಸರು ರಾಣಿ. ಮೂಸಿ ಮತ್ತು ರಾಣಿ ಸ್ನೇಹಿತರಾಗಿದ್ದರು.

ಅವರದೊಂದು ವಿಚಿತ್ರ ಜೋಡಿಯಾಗಿತ್ತು. ಮೂಸಿ ಈಜುವಾಗ ರಾಣಿ ಅವನ ತಲೆಯ ಮೇಲೆ ಕುಳಿತಿರುತ್ತಿತ್ತು.

ಅದನ್ನು ನೋಡಿ ಉಳಿದ ಮೊಸಳೆಗಳು ನಕ್ಕು ಗೇಲಿ ಮಾಡುತ್ತಿದ್ದವು. ಅದರಿಂದ ಅವರ ಸ್ನೇಹಕ್ಕೆ ಭಂಗ ಬರಲಿಲ್ಲ. ಮೂಸುವುದು, ಕಣ್ಣೀರಿಡುವುದು ಹಾಗೂ ರಾಣಿಯ ಸ್ನೇಹ ಇವೇ ಮೂಸಿಯ ಹವ್ಯಾಸ ಆಗಿದ್ದವು.





ಬೇಸಿಗೆಯ ಒಂದು ಮಧ್ಯಾಹ್ನ ರಾಣಿ ಮೂಸಿಯ ಕಿವಿಯ ಹತ್ತಿರ ಬಂದು ಕುಳಿತು ಹೇಳಿತು. ''ಇಬ್ಬರು ಮನುಷ್ಯರು ಬಂದೂಕು ಹಿಡಿದು ಇತ್ತಲೇ ಬರುವುದನ್ನು ನೋಡಿದೆ. ಚರ್ಮದ ಆಸೆಗಾಗಿ ಅವರು ಮೊಸಳೆಗಳನ್ನು ಕೊಲ್ಲುತ್ತಾರೆ.''

''ಈ ಮನುಷ್ಯರಿಗೆ ತಮ್ಮದೇ ಚರ್ಮ ಇಲ್ಲವೇ?'' ಎಂದು ಮೂಸಿ ಆಶ್ಚರ್ಯ ಪಟ್ಟಿತು.

''ಉಳಿದ ಮೊಸಳೆಗಳಿಗೂ ತಿಳಿಸಿ ಅಡಗಿ ಕೊಳ್ಳಲು ಹೇಳು'' ಎಂದು ರಾಣಿ ಮೂಸಿಗೆ ಹೇಳಿತು.

''ಓ, ರಾಣಿ, ಅವರು ನಿನಗೂ ಗುಂಡು ಹೊಡೆಯುವುದಿಲ್ಲವೇ? ನಾನೇನು ಮಾಡಲಿ?'' ಎಂದು ಮೂಸಿ ದುಃಖದಿಂದ ಕಣ್ಣೀರು ಸುರಿಸ ಹತ್ತಿತು.

''ನನ್ನ ಅತ್ತೆ ನನಗೆ ಹೇಳಿದ್ದಾರೆ, ಮನುಷ್ಯರು ಪಾತರಗಿತ್ತಿಯನ್ನು ಬಲೆಹಾಕಿ ಹಿಡಿದು ಗುಂಡು ಸೂಜಿಯಿಂದ ಮರದ ಮಣೆಗೆ ಚುಚ್ಚುತ್ತಾರಂತೆ'' ಎಂದು ಹೇಳಿ ರಾಣಿ ಹಾರಿ ಹೋಯಿತು.





‘‘ನಮ್ಮನ್ನು ಕೊಲ್ಲಲು ಮನುಷ್ಯರು ಬರುತ್ತಿದ್ದಾರೆ....... ಓಡಿ...... ಅಡಗಿಕೊಳ್ಳಿ’’ ಎಂದು ಮೂಸಿ ಕೂಗುತ್ತಿತ್ತು - ಉಳಿದ ಮೊಸಳೆಗಳು ಮೊದಲಿಗೆ ಅದರ ಮಾತನ್ನು ನಂಬಲಿಲ್ಲ. ಆದರೆ, ಅಷ್ಟರಲ್ಲಿ ಅವಕ್ಕೆ ಮನುಷ್ಯರ ಹೆಜ್ಜೆಯ ಸಪ್ಪಳ ಕೇಳತೊಡಗಿತು.

ಮೊಸಳೆಗಳು ನೀರಿನ ಆಳದಲ್ಲಿ ಮುಳುಗಿದವು. ನೀರಿನ ಮೇಲೆ ಕೊಳೆತ ಮರದ ದಿನ್ನೆಗಳು ತೇಲುತ್ತ ಉಳಿದವು. ಅವನ್ನೇ ಮೊಸಳೆಗಳೆಂದು ತಿಳಿದು ಬೇಟೆಗೆ ಬಂದವರು ಗುಂಡು ಹಾರಿಸಿದರು. ಅವರಿಗೆ ಒಂದು ಮೊಸಳೆಯೂ ಸಿಗಲಿಲ್ಲ. ಆದರೆ ತಮ್ಮ ಸುತ್ತ ಹಾರಾಡುತ್ತಿರುವ ನೂರಾರು ಬಣ್ಣ ಬಣ್ಣದ ಪಾತರಗಿತ್ತಿಗಳನ್ನು ಅವರು ಕಂಡರು.






ಅಷ್ಟೊಂದು ಪಾತರಗಿತ್ತಿಗಳನ್ನು ನೋಡಿದ ಅವರು ''ಇಲ್ಲಿ ಮೊಸಳೆಗಳಂತೂ ಇಲ್ಲ. ನಾವು ಬಲೆಗಳನ್ನು ತಂದು ಈ ಪಾತರಗಿತ್ತಿಗಳನ್ನು ಹಿಡಿಯೋಣ'' ಎಂದು ಹೊರಟು ಹೋದರು.

ಇದನ್ನು ನೋಡಿದ ಮೊಸಳೆಗಳೆಲ್ಲ ಒಟ್ಟಾಗಿ ಬಂದು ರಾಣಿಗೆ ಹಾಗೂ ಇತರ ಪಾತರಗಿತ್ತಿಗಳಿಗೆ ತಮ್ಮ ಕೃತಜ್ಞತೆ ಹೇಳಿದವು.





ಮರುದಿನವೇ ಒಂದಿಷ್ಟು ಜನ ಬಲೆಗಳನ್ನು ಹಿಡಿದು ಬರುತ್ತಿರುವುದನ್ನು ಮೂಸಿ ನೋಡಿತು. ರಾಣಿ ಹೇಳಿದ ಮಾತು ಅದಕ್ಕೆ ನೆನಪಾಯಿತು.

"ರಾಣಿ, ನೀವೆಲ್ಲರೂ ಕೂಡಲೇ ನದಿ ದಂಡೆಗೆ ಬನ್ನಿ. ಬಲೆಗಳನ್ನು ಹಿಡಿದ ಮನುಷ್ಯರು ಬರುತ್ತಿದ್ದಾರೆ" ಎಂದು ಮೂಸಿ ಕೂಗಿ ಹೇಳಿತು.

ಎಲ್ಲಾ ಮೊಸಳೆಗಳೂ ನದಿ ದಂಡೆಗೆ ಬಂದವು. ಪಾತರಗಿತ್ತಿಗಳೆಲ್ಲ ಬಂದು ಮೊಸಳೆಗಳ ಬೆನ್ನು ಮತ್ತು ತಲೆಯ ಮೇಲೆ ಕುಳಿತವು.





ಬೇಟೆಗಾರರು ಹತ್ತಿರ ಬರುತ್ತಿದ್ದಂತೆ ಕೆಲವು ಮೊಸಳೆಗಳು ಅವರನ್ನು ಸುತ್ತುವರಿದವು.

ಎಲ್ಲವೂ ತಮ್ಮ ಕ್ರೂರವಾದ ಹರಿತ ಹಲ್ಲುಗಳನ್ನು ತೋರಿಸುತ್ತ ಬಾಯಿ ತೆರೆದು-ಮುಚ್ಚಿ ಮಾಡ ತೊಡಗಿದವು.

ಮೂಸಿ ಎಲ್ಲರಿಗಿಂತ ಮುಂದಿದ್ದು ಹಲ್ಲು ಮಸೆಯುತ್ತ ಬಾಲವನ್ನು ಅತ್ತಿತ್ತ ಬಡಿಯುವ ರಭಸಕ್ಕೆ ಬೇಟೆಗಾರರು ಬೆದರಿ ಅಲ್ಲಿಂದ ಓಡಿದರು.

ಉಳಿದ ಮೊಸಳೆಗಳಿಗೆ ಮೂಸಿಯನ್ನು ನೋಡಿ ಈಗ ಅಭಿಮಾನ ಎನಿಸಿತು. ಏಕೆಂದರೆ ಅದು ನಿಜವಾದ ಮೊಸಳೆಯಂತೆ ನಡೆದುಕೊಂಡಿತ್ತು. ಮೂಸಿಗೂ ತಾನು ಮೊಸಳೆ ಎಂಬುದಕ್ಕೆ ಅಭಿಮಾನ ಎನಿಸಿತು.








ಎಲ್ಲಾ ಪಾತರಗಿತ್ತಿಗಳು ಮೊಸಳೆಗಳನ್ನು ಸುತ್ತುವರಿದು ಹಾರಾಡಿದವು. ಅವುಗಳ ರೆಕ್ಕೆಗಳ ಬಡಿತದ ಸಂಗೀತ ಸುತ್ತಲೂ ಕೇಳಿ ಬಂತು.

ಅವೆಲ್ಲವೂ ಒಟ್ಟಾಗಿ ಹೇಳಿದವು.

''ಮೂಸಿ, ನಿನಗೆ ಕೃತಜ್ಞರಾಗಿದ್ದೇವೆ''

''ಮೊಸಳೆಗಳೇ! ನಿಮಗೆಲ್ಲ ನಾವು ಕೃತಜ್ಞರಾಗಿದ್ದೇವೆ''.

ಆಗ ಮೂಸಿ ಹೇಳಿತು. ''ಅದೇನು ದೊಡ್ಡ ವಿಷಯವಲ್ಲ ; ಸ್ನೇಹಿತರು ಇರುವುದೇ ಅದಕ್ಕೆ. ಒಬ್ಬರು ಮತ್ತೊಬ್ಬರಿಗೆ ಪರಸ್ಪರ ಸಹಾಯ ಮಾಡುವುದಕ್ಕೆ.



ಮೊಸಳೆ ಇರಲಿ, ಪಾತರಗಿತ್ತಿ ಇರಲಿ, ಒಬ್ಬ ಇನ್ನೊಬ್ಬನ ಸಹಾಯಕ್ಕೆ ಬಾರದೆ ಇದ್ದರೆ ಅಂತಹ ಸ್ನೇಹ ಇದ್ದೇನು ಪ್ರಯೋಜನ? ಮೊಸಳೆ ಪಾತರಗಿತ್ತಿ ಸೇರಿ ಬೇಟೆಗಾರರನ್ನು ಧೈರ್ಯದಿಂದ ಎದುರಿಸಿ ಓಡಿಸಿದರು. ಈ ಇಬ್ಬರು ಸ್ನೇಹಿತರ ಬುದ್ಧಿವಂತಿಕೆಯ ಕಥೆ ಮೊಸಳೆ ಮತ್ತು ಪಾತರಗಿತ್ತಿ.


ಈ ಮಾ ಲಿಕೆ ಯ ಇತರ ಪು ಸ್ತ ಕೆಗಳು :

**ಒಂದು ದೊಡ್ಡ ವಿಪತ್ತು ● ಜೇಡರ ಚಾಲ್ಯ**

**ನಮ್ಮ ಅದ್ಭುತ ಜಗತ್ತು ● ನೌಕಾಯಾನ**

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ

**www.prathambooks.org**



ಪ್ರಥಮ್ ಬುಕ್ ಭಾರತೀಯ ಭಾಷೆಗಳಲ್ಲಿ ಉತ್ತಮ ದರ್ಜೆಯ ಮತ್ತು ಕಡಿಮೆ ಬೆಲೆಯ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು.

ISBN 81-8263-087-8

9788182630871

Mosale Mathu Patharagithi (Kannada)

Rs. 20.00